2052(2297) ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 2003–04 ಹಾಗೂ 2004–05ನೇ ಸಾಲಿನಲ್ಲಿ ಸಾರಾಯಿ, ಮದ್ಯ ವಿದೇಶಿ ಮದ್ಯ ಹಾಗೂ ಇತ್ಯಾದಿ ಉತ್ಪಾದನೆಗಳಿಂದ ಸರ್ಕಾರಕ್ಕೆ ಬರುವ ಅಬಕಾರಿ ಆದಾಯ ಎಷ್ಟು;

ಆ) 2005–06ನೇ ಸಾಲಿಗೆ ಸರ್ಕಾರ ಅಬಕಾರಿ ಆದಾಯ ಎಷ್ಟು ನಿರೀಕ್ಷೆ ಮಾಡಿದೆ;

ಇ) ಸಾರಾಯಿ ಮತ್ತು ಹೆಂಡದ ಗುತ್ತಿಗೆಗಳನ್ನು ತಾಲ್ಲೂಕುವಾರು ಹರಾಜಿನ ಬದಲಾಗಿ ಪ್ರತಿ ನಗರಸಭೆ ಹಾಗೂ ಗ್ರಾಮ ಪಂಚಾಯತಿಯ ಮುಖಾಂತರ ಹರಾಜು ಮಾಡಲು ಸರ್ಕಾರ ಉದ್ದೇಶಿಸಿದೆಯೇ;

ಈ) ಹಾಗಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು):

ಅ) ರಾಜ್ಯದಲ್ಲಿ 2003–04 ಹಾಗೂ 2004–05ನೇ ಸಾಲಿನಲ್ಲಿ ಸಾರಾಯಿ, ಮದ್ಯ, ವಿದೇಶಿ ಮದ್ಯ ಹಾಗೂ ಇತ್ಯಾದಿ ಉತ್ಪಾದನೆಗಳಿಂದ ಸರ್ಕಾರಕ್ಕೆ ಬಂದಿರುವ ಅಬಕಾರಿ ಆದಾಯದ ವಿವರ ಈ ಕೆಳಗಿನಂತಿರುತ್ತದೆ:

(ಕೋಟಿ ರೂ.ಗಳಲ್ಲಿ)

	2003–04	2004–05 (ಫೆಬ್ರವರಿ ಅಂತ್ಯದವರೆಗೆ)
ಸಾರಾಯಿ	1037.21	903.59
ಮದ್ಯ	1000.23	958.48
ಬಿಯರ್	169.02	158.85
ಇತರೆ	158.44	243.51
ಒಟ್ಟು	**2364.90**	**2264.43**

ಆ) 2005–06ನೇ ಸಾಲಿಗೆ ಸರ್ಕಾರ ಸುಮಾರು 3025 ಕೋಟಿ ರೂ.ಗಳ ಆದಾಯ ನಿರೀಕ್ಷಿಸಿದೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

2053(2298) ಶ್ರೀ ಬಸವರಾಜ್ ರಾಯರೆಡ್ಡಿ (ಯಲ್‌ಬುರ್ಗ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನಾಲ್ಕು ಪಥ, ಆರು ಪಥ ಮತ್ತು ಎಂಟು ಪಥಗಳ ರಸ್ತೆಗಳನ್ನು ನಿರ್ಮಾಣ ಮಾಡಲು ಸರ್ಕಾರ ಉದ್ದೇಶಿಸಿದೆಯೇ;

ಆ) ಹಾಗಿದ್ದಲ್ಲಿ, ಯಾವ ಯಾವ ರಾಷ್ಟ್ರೀಯ ಹೆದ್ದಾರಿಗಳನ್ನು ಪ್ರಾರಂಭ ಮಾಡಲಾಗಿದೆ ಮತ್ತು ಪ್ರಾರಂಭ ಮಾಡಬೇಕೆಂದಿರುವ ರಾಷ್ಟ್ರೀಯ ಹೆದ್ದಾರಿಗಳಾವುವು (ವಿವರ ತಿಳಿಸುವುದು);

ಇ) ಈ ಪಥಗಳ ವಿಸ್ತರಣೆ ಮಾಡಲು ವೆಚ್ಚ ಮಾಡಲಾಗುತ್ತಿರುವ ಹಣವೆಷ್ಟು; ಹಾಗೂ ಇದರಲ್ಲಿ ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಪಾಲೆಷ್ಟು;

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ರಾಜ್ಯದಲ್ಲಿ ನಾಲ್ಕು ಪಥ, ಆರು ಪಥ ಮತ್ತು ಎಂಟು ಪಥಗಳ ರಸ್ತೆಗಳನ್ನು ನಿರ್ಮಾಣ ಮಾಡಲು ಸರ್ಕಾರಕ್ಕೆ ಉದ್ದೇಶವಿದೆ.

ಆ) ಪ್ರಾರಂಭ ಮಾಡಿರುವ ರಾಷ್ಟ್ರೀಯ ಹೆದ್ದಾರಿಗಳ ವಿವರ: (4 ಲೇನ್)

1.	Golden Quadrilateral	625 ಕಿ.ಮೀ.ಗಳು
2.	North South Corridor	94 ಕಿ.ಮೀ.ಗಳು
3.	Port connectivity	36 ಕಿ.ಮೀ.ಗಳು

ಪ್ರಾರಂಭ ಮಾಡಲು ಪ್ರಸ್ತಾವಿಸಿರುವ ರಾ.ಹೆ.ಗಳ ವಿವರ:

1.	ಎನ್‌ಹೆಚ್–7 (ಬೆಂಗಳೂರು–ಹೊಸೂರು)	6 ಲೇನ್ 25 KM
2.	ಎನ್‌ಹೆಚ್–4 (ಬೆಂಗಳೂರು–ನೆಲಮಂಗಲ)	6 ಲೇನ್ 19.5 KM
3.	ಎನ್‌ಹೆಚ್–48 (ನೆಲಮಂಗಲ–ಹಾಸನ)	4 ಲೇನ್ 157 KM
4.	ಎನ್‌ಹೆಚ್–17 (ಮಂಗಳೂರು–ಪಣಜಿ)	4 ಲೇನ್ 74 KM
5.	ಎನ್‌ಹೆಚ್–4 (ಬೆಂಗಳೂರು–ಮುಳಬಾಗಿಲು)	4 ಲೇನ್–70 KM 6 ಲೇನ್–15 KM

ಇ) ಈಗಾಗಲೇ ಪ್ರಾರಂಭವಾಗಿರುವ ಹೆದ್ದಾರಿಗಳ ಕೆಲಸಗಳಿಗಾಗಿ ತಗಲುವ ವೆಚ್ಚದ ವಿವರ ಕೆಳಕಂಡಂತಿದ್ದು, ಈ ಎಲ್ಲಾ ಮೊತ್ತವನ್ನು ಕೇಂದ್ರ ಸರ್ಕಾರವೇ ಭರಿಸುತ್ತದೆ.

(ಕೋಟಿ ರೂ.ಗಳಲ್ಲಿ)

Goldern Quadrilateral	625 ಕಿಮೀ.	ಸುಮಾರು 2286.00
North South Corridor	94 ಕಿಮೀ.	ಸುಮಾರು 233.00
Port connectivity	36 ಕಿಮೀ.	ಸುಮಾರು 155.00

2054(2803) ಶ್ರೀ ಬಸವರಾಜು ಹೆಚ್.ಡಿ. (ವಿರಾಜಪೇಟೆ): ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆ ಲೋಕೋಪಯೋಗಿ ಇಲಾಖೆಯ ವಿವಿಧ ಕಾಮಗಾರಿಗಳಿಗಾಗಿ ಕಳೆದ ಮೂರು ವರ್ಷಗಳಲ್ಲಿ ಹಾಗೂ ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಿದ ಅನುದಾನದ